**ಕರ್ನಾಟಕ ವಿಧಾನ ಪರಿಷತ್ತು**

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 448
2. ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ
3. ಉತ್ತರಿಸುವ ದಿನಾಂಕ : 10/12/2025
4. ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ರಾಜಾಜಿನಗರದ ಬಿ.ಇ.ಪಿ ವಸತಿ ಗೃಹಗಳ ಸಂಖ್ಯೆ ಎಷ್ಟು; ಮತ್ತು ಈ ವಸತಿ ಗೃಹಗಳಲ್ಲಿ ಯಾವ ಸರ್ಕಾರಿ ನೌಕರ ಯಾವ ದಿನಾಂಕದಿಂದ ವಾಸವಾಗಿರುತ್ತಾರೆ; | ಬೆಂಗಳೂರು ರಾಜಾಜಿನಗರದ ಬಿ.ಇ.ಪಿ ಆವರಣದಲ್ಲಿ ಒಟ್ಟು 12 ಸಂಖ್ಯೆ ಗ್ರೂಪ್ "ಸಿ" & "ಡಿ' ವಸತಿ ಗೃಹಗಳು ಇರುತ್ತವೆ. ಸದರಿ ವಸತಿಗೃಹಗಳಲ್ಲಿ ವಾಸಿಸುತ್ತಿರುವ ಸರ್ಕಾರಿ ನೌಕರರ ವಿವರ ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ದಿನಾಂಕ:31.03.2025 ರ ಅಂತ್ಯಕ್ಕೆ ಕೆಲವು ನಿವೃತ್ತರಾದ ಬಳಿಕವು ವಸತಿ ಗೃಹದಲ್ಲಿ ವಾಸವಾಗಿರುವುದು ನಿಜವೇ ಹಾಗಿದಲ್ಲಿ ಇವರು ಯಾವ ದಿನಾಂಕದಂದು ನಿವೃತ್ತಿ ಹೊಂದಿರುತ್ತಾರೆ. ಮತ್ತು ಇವರಿಂದ ಎಷ್ಟು ಮೊತ್ತದ ದಂಡದ ಮೊತ್ತವನ್ನು ಪಾವತಿಸಿಕೊಳ್ಳಲಾಗಿರುತ್ತದೆ; ಪ್ರತಿ ವಸತಿ ಗೃಹಕ್ಕೆ ಪಾವತಿಸಿಕೊಂಡಿರುವ ದಂಡದ ಮೊತ್ತವನ್ನು ಪ್ರತ್ಯೇಕವಾಗಿ ನೀಡುವುದು; | (1) ಶ್ರೀ. ಅಶ್ವಥ. 'ಡಿ' ಗ್ರೂಪ್ ನೌಕರರು, ದಿನಾಂಕ:-28.02.2025 ರಂದು ವಯೋ ನಿವೃತ್ತಿ ಹೊಂದಿದ್ದು, ವಸತಿಗೃಹವನ್ನು ದಿನಾಂಕ:04.08.2025 ರಂದು ವಸತಿಗೃಹವನ್ನು ತೆರವುಗೊಳಿಸಿರುತ್ತಾರೆ. ಅವರ ಅಂತಿಮ ವೇತನದ ಮನೆ ಬಾಡಿಗೆ ಭತ್ಯೆ ರೂ.13160/- ರಂತೆ 5 ತಿಂಗಳ ಬಾಡಿಗೆಯಾಗಿರೂ. 65800/-ಗಳನ್ನು ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಕಛೇರಿಗೆ ಡಿ.ಡಿ ಸಂಖ್ಯೆ: 516744 ದಿನಾಂಕ:16.09.2025ರಂದು ಪಾವತಿಸಿರುತ್ತಾರೆ.<br><br>ಶ್ರೀಯುತರು ಉಪವಿಭಾಗ ಕಛೇರಿಗೆ ದಿನಾಂಕ:18.02.2025ರಂದು ಮನವಿ ಪತ್ರ ಸಲ್ಲಿಸಿದ್ದು, ಸದರಿ ಮನವಿ ಪತ್ರದಲ್ಲಿ ಶೈಕ್ಷಣಿಕ ವರ್ಷ ಮುಗಿಯುವರೆಗೂ ಹಾಗೂ ಸದರಿಯವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ವಾಸವಾಗಿರುವ ವಸತಿಗೃಹವನ್ನು ತೆರವುಗೊಳಿಸಲು ಸುಮಾರು 6 ತಿಂಗಳುಗಳ ಕಾಲ ಇದೇ ವಸತಿಗೃಹದಲ್ಲಿ ಮುಂದುವರೆಯಲು ಕೋರಿರುತ್ತಾರೆ. ಅದರಂತೆ ಅವರು ದಿನಾಂಕ:04.08.2025ರಂದು ವಸತಿಗೃಹವನ್ನು ತೆರವುಗೊಳಿಸಿರುತ್ತಾರೆ.<br><br>(2) ಶ್ರೀ. ವೆಂಕಟಾಚಲ ಕಾವಲುಗಾರ ನೌಕರರು, ದಿನಾಂಕ:31.10.2023ರಂದು ವಯೋನಿವೃತ್ತಿ ಹೊಂದಿದ್ದು, ವಸತಿಗೃಹವನ್ನು ದಿನಾಂಕ:05.11.2025 ರಂದು ವಸತಿಗೃಹವನ್ನು ತೆರವುಗೊಳಸಿರುತ್ತಾರೆ. ಅವರ ಅಂತಿಮ ವೇತನದ ಮನೆ ಬಾಡಿಗೆ ಭತ್ಯೆರೂ. 3672/- ರಂತೆ ವಸತಿಗೃಹವನ್ನು ತೆರವುಗೊಳಿಸುವ ವರೆಗೂ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಕಛೇರಿಗೆ ಡಿ.ಡಿ ಮುಖಾಂತರ ಪ್ರತಿ ಮಾಹೆ ವಸತಿಗೃಹ ಬಾಡಿಗೆಯನ್ನು ಪಾವತಿಸಿರುತ್ತಾರೆ. |

| | | |
|---|---|---|
| | | ಶ್ರೀಯುತರು ಇದೇ ವಸತಿಗೃಹದಲ್ಲಿ ವಾಸ್ತವ್ಯ ಮುಂದುವರೆಯಲು ಕೋರಿ ದಿನಾಂಕ:16.10.2023 ರಂದು ಉಪ ವಿಭಾಗ ಕಛೇರಿಗೆ ಮನವಿ ಪತ್ರ ಸಲ್ಲಿಸಿರುತ್ತಾರೆ. ಅದರಂತೆ ಅವರು ದಿನಾಂಕ:05.11.2025 ರಂದು ವಸತಿಗೃಹವನ್ನು ತೆರವುಗೊಳಿಸಿರುತ್ತಾರೆ.<br>ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ:ಪಿ.ಡಬ್ಲ್ಯೂಡಿ 245 ಪಿಪಿಎಂ 96, ಬೆಂಗಳೂರು, ದಿನಾಂಕ:-22.01.1999 ಕಂಡಿಕೆ ಸಂಖ್ಯೆ:- 12 ರ ಪ್ರಕಾರ 10 ನೇ ನಿಯಮದಲ್ಲಿ ಸರ್ಕಾರಿ ವಸತಿಗೃಹದಲ್ಲಿ ವಾಸಿಸುತ್ತಿರುವ ಹಂಚಿಕೆ ಪಡೆದವನಿಗೆ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಬೆಂಗಳೂರಿನಿಂದ ಹೊರಗೆ ವರ್ಗವಾದಲ್ಲಿಅಥವಾ ನಿವೃತ್ತನಾದಲ್ಲಿ, ಹಂಚಿಕೆ ಸಮಿತಿಯು ಅಂಥವರಿಗೆ ಸಾಮಾನ್ಯ ಲೆಸೆನ್ಸ್ ಶುಲ್ಕದಲ್ಲಿಯೇ ಆ ಶೈಕ್ಷಣಿಕ ವರ್ಷ ಮುಕ್ತಾಯಗೊಳ್ಳುವವರಿಗೆ ಮಾತ್ರವೇ ವಾಸವನ್ನು ಮುಂದುವರಿಸಲು ಅನುಮತಿ ನೀಡಬಹುದಾಗಿದೆ.<br>ಸದರಿ ಅವಧಿಯಲ್ಲಿ 12 ವಸತಿ ಗೃಹಗಳಲ್ಲಿ 3 ವಸತಿಗೃಹಗಳು ಖಾಲಿಯಿದ್ದುದರಿಂದ ಮೇಲ್ಕಂಡ ನೌಕರರುಗಳನ್ನು ವಸತಿಗೃಹದಲ್ಲಿ ಮುಂದುವರೆಸಿದ್ದಲ್ಲಿ ಸರ್ಕಾರಕ್ಕೆ ಆದಾಯ ಸ್ವೀಕೃತಿಯಾಗುವ ಕಾರಣದಿಂದಾಗಿ ಮುಂದುವರೆಸಲಾಗಿರುತ್ತದೆ. |
| ಇ) | ನಿಯಮಾವಳಿಯ ರೀತ್ಯ ನಿವೃತ್ತರಾದ ಬಳಿಕ ಎಷ್ಟು ಕಾಲದವರೆಗೆ ದಂಡ ಮುಕ್ತವಾಗಿ ಹಾಗೂ ದಂಡ ಸಹಿತವಾಗಿ ವಸತಿ ಗೃಹದಲ್ಲಿ ಮುಂದುವರೆಯಬಹುದು; ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕವನ್ನು ತಿಳಿಸುವುದು; | ಲೋಕೋಪಯೋಗಿ ಸಚಿವಾಲಯ ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ ಪಿ.ಡಬ್ಲ್ಯೂ.ಡಿ 245 ಪಿಪಿಎಂ 96, ಬೆಂಗಳೂರು ದಿನಾಂಕ:22.01.1999ರ ಕಂಡಿಕೆ ಸಂಖ್ಯೆ (12) ರ ಪ್ರಕಾರ ಮುಂದಿನ ಶೈಕ್ಷಣಿಕ ವರ್ಷ ಪೂರ್ಣಗೊಳ್ಳುವವರೆಗೆ ಮುಂದುವರೆಯಲು ಅವಕಾಶವಿರುತ್ತದೆ. |
| ಈ) | ನಿವೃತ್ತರಾದ ನೌಕರರು ವಸತಿ ಗೃಹವನ್ನು ತೆರವುಗೊಳಿಸದಿದ್ದಲ್ಲಿ ಇವರಿಗೆ ನೋಟೀಸನ್ನು ನೀಡಲಾಗಿರುವುದೇ; ಯಾವ ಯಾವ ದಿನಾಂಕದಲ್ಲಿ ನೋಟೀಸನ್ನು ನೀಡಲಾಗಿರುತ್ತದೆ; | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಇ, ನಂ.2, ಉತ್ತರ ಉಪವಿಭಾಗ, ಬೆಂಗಳೂರು ಕಛೇರಿ ಸೂಚನಾ ಪತ್ರ ಸಂಖ್ಯೆ:- 352/2025-26/ದಿನಾಂಕ:02.08.2025ರಂದು ಶ್ರೀ. ಅಶ್ವಥ. 'ಡಿ' ಗ್ರೂಪ್ ನೌಕರವರಿಗೆ ವಸತಿಗೃಹ ತೆರವುಗೊಳಿಸಲು ನೋಟೀಸ್‌ನ್ನು ನೀಡಲಾಗಿರುತ್ತದೆ. |
| ಉ) | ಸರ್ಕಾರಿ ವಸತಿ ಗೃಹ ಹಂಚಿಕೆಗಾಗಿ ಈಗಾಗಲೇ ನೋಂದಣಿ ಮಾಡಿ ಕಾದಿರುವ ನೌಕರರಿಗೆ ನಿವೃತ್ತಿ ಹೊಂದಿರುವ ನೌಕರರಿಂದ ವಸತಿ ಗೃಹವನ್ನು ತೆರವುಗೊಳಿಸಿ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ? | ನಿವೃತ್ತರಾದ ಯಾವುದೇ ನೌಕರರು ಪ್ರಸ್ತುತ ಯಾವುದೇ ವಸತಿಗೃಹದಲ್ಲಿ ವಾಸವಾಗಿರುವುದಿಲ್ಲ. ಪ್ರಸ್ತುತ 4 ವಸತಿಗೃಹಗಳು ಖಾಲಿಯಿದ್ದು, ವಸತಿಗೃಹಕ್ಕಾಗಿ ಯಾವುದೇ ನೌಕರರಿಂದ ಬೇಡಿಕೆ ಪತ್ರ ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: ಲೋಇ 85 ಬಿಎಲ್ ಕ್ಯೂ 2025**

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.

## ಅನುಬಂಧ-1

## ವಸತಿಗೃಹದಲ್ಲಿ ವಾಸವಿರುವ ನೌಕರರ ವಿವರ

| ಕ್ರ.ಸಂ | ಸರ್ಕಾರಿ ವಸತಿ ಗೃಹದ ಆಸ್ತಿ ವಿವರ (ಕಟ್ಟಡದ ಮಾದರಿ ಮತ್ತು ಹೆಸರು ಗೃಹ ಸಂಖ್ಯೆ) | ವಸತಿದಾರರ ಹೆಸರು, ಹುದ್ದೆ ಹಾಗೂ ಇಲಾಖಾ ವಿವರ | ಯಾವ ದಿನಾಂಕದಿಂದ ವಾಸವಾಗಿರುತ್ತಾರೆ. | ವೇತನ ಬಟವಾಡೆಯ ಅಧಿಕಾರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ |
|---|---|---|---|---|
| 1 | 1 | ರಾಘು. ಎಂ. -ದ್ವಿ.ದ.ಸ | 05.03.2025 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಇ, ಗುಣಭರವಸೆ ಉಪವಿಭಾಗ, ಬೆಂಗಳೂರು |
| 2 | 2 | ಗಣೇಶ್ -ಸಿ.ಗ್ರೂಪ್ | 16.01.2021 | ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದ), ಬೆಂಗಳೂರು |
| 3 | 3 | ಸುರೇಶ್ -(ಡಿ ಗ್ರೂಪ್) | 08.10.2020 | ಅಧೀನ ಕಾರ್ಯದರ್ಶಿಗಳು,ಲೋಇ,ಸಂಪರ್ಕ ವಿಭಾಗ, ಕೊ.ಸಂ.339, 3ನೇ ಮಹಡಿ, ವಿಕಾಸಸೌಧ, ಬೆಂ |
| 4 | 4 | ಗೀತಾಂಜಲಿ | 01.03.2021 | ಉಪನೋಂಧಣಾಧಿಕಾರಿಗಳು, ಮಲ್ಲೇಶ್ವರಂ. ನಂ. 11,12 1ನೇ ಮತ್ತು 2ನೇ ಮುಖ್ಯ ರಸ್ತೆ, ಬೆಂಗಳೂರು-560003 |
| 5 | 5 | ವಸತಿಗೃಹ ಖಾಲಿಯಿರುತ್ತದೆ. | | |
| 6 | 6 | ವಸತಿಗೃಹ ಖಾಲಿಯಿರುತ್ತದೆ. | | |
| 7 | 7 | ವಸತಿಗೃಹ ಖಾಲಿಯಿರುತ್ತದೆ. | | |
| 8 | 8 | ವಸತಿಗೃಹ ಖಾಲಿಯಿರುತ್ತದೆ. | | |
| 9 | 9 | ಸೈಯದ್ ಮುಕ್ತರ್ ಉಲ್-ಹಖ್ -ದ್ವಿದಸ | 10.04.2018 | ಮುಖ್ಯ ಇಂಜಿನಿಯರ್, ಮುಖ್ಯ ಇಂಜಿನಿಯರಿಂಗ್ ಘಟಕ, ಆರೋಗ್ಯ ಮತ್ತು ಕಲ್ಯಾಣ ಇಲಾಖೆ, ಬೆಂ. |
| 10 | 10 | ಬಿ.ಆರ್. ನಾಗಣ್ಣ | 05.04.2014 | ಕರ್ನಾಟಕ ರಾಜ್ಯ ನಿರ್ಮಾಣ ನಿಯಮಿತ |
| 11 | 11 | ದೀಲೀಪ್ ಕುಮಾರ್. ಹೆಚ್.ಆರ್ | | ಕಾರ್ಯಪಾಲಕ ಅಭಿಯಂತರರು, ಲೋಇ, ಬೆಂಗಳೂರು ವಿಭಾಗ, ಬೆಂ |
| 12 | 12 | ಯಶೋದಮ್ಮ | | ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ಜಿಲ್ಲೆ, ಬೆಂ. |

ಮುಖ್ಯ ಅಭಿಯಂತರರು
ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ)
ಬೆಂಗಳೂರು